# ಬರೀ ಹುಡ್ಗೀರು...

ಹೆಣ್ಣು ಮಕ್ಕಳು ತಂಡ ಕಟ್ಟಿಕೊಂಡು ರೂಪಿಸಿರುವ 'ರಿಂಗ್ ರೋಡ್' ಸಿನಿಮಾ ದಸರೆಯ ಸಂದರ್ಭದಲ್ಲಿ ತೆರೆ ಕಾಣುತ್ತಿದೆ. ಪ್ರಿಯಾ ಬೆಳ್ಳಿಯಪ್ಪ ನಿರ್ದೇಶನದ ಈ ಚಿತ್ರದ ಎಲ್ಲ ತಂತ್ರಜ್ಞರೂ ಮಹಿಳೆಯರೆನ್ನುವುದು ವಿಶೇಷ. 'ಬರೀ ಹುಡ್ಗೀರು' ಸಾಹಸದ ಈ ಸಿನಿಮಾ ಕನ್ನಡ ಚಿತ್ರರಂಗದ ಪಾಲಿಗೆ ನಿಜವಾದ ದಸರೆ. ಕಥೆ ಕೂಡ ಮಹಿಳಾ ಪ್ರಧಾನವಾದುದು. ಬೆಂಗಳೂರಿನ ತರುಣಿಯೊಬ್ಬಳು ಎಸಗಿದ ಅಪರಾಧ ಕೃತ್ಯದ ಸ್ಫೂರ್ತಿ ಈ ಚಿತ್ರದ ಕಥೆಗೆ ಪ್ರೇರಣೆ.

ಮುಂಬೈ ಹುಡುಗಿ ಖುಷಿ ಮುಖ್ಯ ಪಾತ್ರದಲ್ಲಿ ನಟಿಸಿರುವ ಈ ಚಿತ್ರದಲ್ಲಿ ಅತಿಥಿ ನಟರ ದಂಡೇ ಇದೆ. ವಿಜಯ್, ನಿಖಿತಾ ತುಕ್ರಾಲ್, ಪ್ರೇಮ್, ಶ್ರೀನಗರ ಕಿಟ್ಟಿ, ಸಂಜನಾ, ಪಟ್ರೆ ಅಜಿತ್– ಹೀಗೆ ತಾರಾಗಣದಲ್ಲೂ ಹಬ್ಬದ ಸಂಭ್ರಮವಿದೆ. ರಜನಿ ರವೀಂದ್ರದಾಸ್ ನಿರ್ಮಾಣ, ರೇಖಾ ರಾಣಿ ಸಂಭಾಷಣೆ, ವಾಣಿ ಹರಿಕೃಷ್ಣ ಸಂಗೀತ, ರೇಶ್ಮಿ ಸರ್ಕಾರ್ ಛಾಯಾಗ್ರಹಣ, ಚಿತ್ರಲೇಖಾ ಶೆಟ್ಟಿ ಕಲಾ ನಿರ್ದೇಶನ, ಜೀವಿತಾ ವಿಶ್ವನಾಥ್ ನೃತ್ಯ, ಅವಂತಿಕಾ ಶಬ್ದಗ್ರಹಣ– ಹೀಗೆ 'ರಿಂಗ್ ರೋಡ್'ನ ಎಲ್ಲ ಹಂತಗಳಲ್ಲೂ ಸ್ತ್ರೀಸ್ಪರ್ಶವಿದೆ.

ಯಾವುದೇ ಭಾಷೆಯ ಚಿತ್ರರಂಗವಾದರೂ ಹೆಮ್ಮೆಪಡಬಹುದಾದ ಈ ಸಿನಿಮಾ ತೆರೆಕಾಣುವ ನಿಟ್ಟಿನಲ್ಲಿ ಹಲವು ಅಡೆತಡೆಗಳನ್ನೆದುರಿಸಿತು ಎನ್ನುವ ಕಹಿಸತ್ಯವನ್ನೂ ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು. ಚಿತ್ರದ ಶೀರ್ಷಿಕೆಯೊಂದಿಗೆ ತಳಕು ಹಾಕಿಕೊಂಡಿದ್ದ ಸುಮ, ಶುಭ ಹೆಸರುಗಳಿಗೆ ತಕರಾರು ಎದುರಾದುದರಿಂದ ಹಿಡಿದು, ಚಿತ್ರಮಂದಿರಗಳನ್ನು ದೊರಕಿಸಿಕೊಳ್ಳುವವರೆಗೆ ಈ ಹೆಣ್ಣುಮಕ್ಕಳು ಎದುರಿಸಿರುವ ಸಮಸ್ಯೆಗಳು ಒಂದೆರಡಲ್ಲ. ಕೊನೆಗೂ, 'ರಿಂಗ್ ರೋಡ್' ತೆರೆ ಕಾಣುತ್ತಿದೆ. ಪ್ರೇಕ್ಷಕರು 'ಶುಭಂ' ಎಂದರೆ ಹೊಸ ಪ್ರಯತ್ನವೊಂದು ಗೆಲ್ಲಬಹುದು.





# ಶಿವಣ್ಣನ 'ಶ್ರೀಕಂಠ'

ಕೆಲವು ದಿನಗಳ ಹಿಂದಷ್ಟೇ ಅನಾರೋಗ್ಯದಿಂದ ಬಳಲಿದ್ದ ಶಿವರಾಜಕುಮಾರ್, ಅಂತಹದ್ದೇನೂ ನಡೆದೇ ಇಲ್ಲ ಎನ್ನುವಷ್ಟು ಆರಾಮಾಗಿ ಓಡಾಡಿಕೊಂಡಿದ್ದರು. ಅವರ ಮಾತು ಮತ್ತು ನಡೆ– ಎರಡರಲ್ಲೂ ಹೊಸ ಉತ್ಸಾಹವಿತ್ತು. ಅದು 'ಶ್ರೀಕಂಠ' ಚಿತ್ರದ ಮುಹೂರ್ತ ಸಂದರ್ಭ. ಕಳೆದ ವಾರ ಮುಹೂರ್ತ ನಡೆಸಿದ ಈ ಚಿತ್ರದ ಮೂಲಕ ಶಿವರಾಜ್ ಮತ್ತೆ ಚಿತ್ರರಂಗದ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ.

'ಶ್ರೀಕಂಠ' ಹೆಸರಿನಲ್ಲಿರುವ ಆಪ್ತತೆ ಕಥೆಯಲ್ಲೂ ಇದೆ ಎನ್ನುತ್ತಾರೆ ಯುವ ನಿರ್ದೇಶಕ ಮಂಜು ಸ್ವರಾಜ್. 'ಶಿಶಿರ', 'ಶ್ರಾವಣಿ ಸುಬ್ರಹ್ಮಣ್ಯ' ಸಿನಿಮಾಗಳ ಮೂಲಕ ಗಮನಸೆಳೆದಿರುವ ಮಂಜು, ಶಿವರಾಜ್ ಚಿತ್ರದ ಮೂಲಕ ತಮ್ಮ ವೃತ್ತಿಜೀವನದ ಹೊಸದೊಂದು ಮಜಲು ಕಂಡುಕೊಳ್ಳುವ ಉತ್ಸಾಹದಲ್ಲಿದ್ದಾರೆ. ಸುಮಾರು ಒಂದು ವರ್ಷ ಕಾಲ ಈ ಸಿನಿಮಾದ ಚಿತ್ರಕಥೆ ಮಾಡಲು ಅವರು ಶ್ರಮ ಪಟ್ಟಿದ್ದಾರಂತೆ. 'ಈ ಚಿತ್ರದಲ್ಲಿ ಶಿವಣ್ಣ ಕಾಮನ್ ಮ್ಯಾನ್ ಆಗಿ ಕಾಣಿಸಿಕೊಳ್ಳುತ್ತಿದ್ದಾರೆ. ಅವರು ಲಾಂಗ್ ಹಿಡಿಯುವುದಿಲ್ಲ. ಅಬ್ಬರಿಸಿ ಬೊಬ್ಬಿರಿವ ಹೊಡೆದಾಟಗಳು ಚಿತ್ರದಲ್ಲಿ ಇರುವುದಿಲ್ಲ. ಇದೊಂದು ಸಾದಾ ಸೀದಾ ವ್ಯಕ್ತಿತ್ವದ ಕಥೆ. ಜನಸಾಮಾನ್ಯರು ತಮ್ಮೊಂದಿಗೆ ಗುರ್ತಿಸಿಕೊಳ್ಳುವಂಥ ಪಾತ್ರವನ್ನು ಶಿವಣ್ಣ ನಿರ್ವಹಿಸುತ್ತಿದ್ದಾರೆ' ಎನ್ನುವ ಮಂಜು ಅವರ ಮಾತುಗಳಲ್ಲಿ, 'ಶ್ರೀಕಂಠ' ಒಂದು ವಿಭಿನ್ನ ಚಿತ್ರವಾಗುವ ಸುಳಿವಿದೆ.

ಹಿರಿಯ ಕಲಾವಿದರಾದ ಅನಂತನಾಗ್ ಹಾಗೂ ಅರುಂಧತಿ ನಾಗ್ ಮುಖ್ಯ ಪಾತ್ರಗಳಲ್ಲಿ ನಟಿಸುವುದು ಹೆಚ್ಚೂ ಕಡಿಮೆ ಖಚಿತವಾಗಿದೆ. ಆದರೆ, ಈವರೆಗೆ ನಾಯಕಿ ಯಾರೆನ್ನುವುದು ಖಚಿತವಾಗಿಲ್ಲ. ಈ ನಡುವೆ ಶಿವರಾಜ್‌ರ 'ಕಿಲ್ಲಿಂಗ್ ವೀರಪ್ಪನ್' ಚಿತ್ರದ ಕುರಿತ ನಿರೀಕ್ಷೆಗಳು ಹೆಚ್ಚಾಗಿವೆ. ಸಿನಿಮಾದ ಟ್ರೈಲರ್‌ಗಳು ಈಗಾಗಲೇ ಚಿತ್ರರಸಿಕರ ಕುತೂಹಲ ಕೆರಳಿಸಿದ್ದು, ನವೆಂಬರ್‌ನಲ್ಲಿ ರಾಮ್‌ಗೋಪಾಲ್ ವರ್ಮ ನಿರ್ದೇಶನದ ಈ ಚಿತ್ರ ತೆರೆ ಕಾಣಲಿದೆ.

■ ರಘು